ನಿಮ್ಮ ಪುಟ

## ಗೃಹಪ್ರವೇಶಕ್ಕೆ ಸಜ್ಜಾದ ನೂತನ ಗೃಹ

ಸುಂದರವಾದ ಮನೆ, ಅದರ ಮುಂದೆ ಅಷ್ಟೇ ಸುಂದರವಾದ ಕೈತೋಟ. ಜೊತೆಗೆ ಅಂಗಳದಲ್ಲಿ ಕಾರು ಪಾರ್ಕಿಂಗ್, ತೂಗು ಮಂಚ, ಈಜುಕೊಳ. ಇವುಗಳ ನಡುವೆ ಬೆಳಿಗ್ಗೆ ವಾಯುವಿಹಾರ ಮಾಡುತ್ತಾ, ದಿನಪತ್ರಿಕೆಯೊಂದಿಗೆ ಕಾಫಿ ಕುಡಿಯುತ್ತಾ ಸಮಾಲೋಚನೆ ಮಾಡುತ್ತಿದ್ದರೆ ಆಹಾ ಎಷ್ಟು ಚೆಂದ ಅಲ್ಲವೇ?.

ಇಂತಹದ್ದೊಂದು ಕಲ್ಪನೆಯನ್ನು ತಮ್ಮ ಕಲಾ ನೈಪುಣ್ಯದಲ್ಲಿ ಅರಳಿಸಿದ್ದಾರೆ ನಿಂಗರಾಜ ಶಿವಪುತ್ರಪ್ಪ ಕರಕಿಕಟ್ಟಿಯವರು.

ಬಾಗಲಕೋಟೆಯ ಬಾದಾಮಿ ತಾಲ್ಲೂಕಿನ ಚೊಳಚಗುಡ್ಡದ ಇವರು ವೃತ್ತಿಯಲ್ಲಿ ಕೃಷಿಕರು, ವ್ಯಾಪಾರಸ್ಥರೂ ಹೌದು. ಪ್ರವೃತ್ತಿಯಿಂದ ಕಲಾವಿದ.

ಎಲ್ಲ ಸವಲತ್ತುಗಳುಳ್ಳ ಐಷಾರಾಮಿ ಮನೆಯನ್ನು ಕಟ್ಟುವುದು ಪ್ರತಿಯೊಬ್ಬರ ಕನಸು. ಅಂತೆಯೇ ಇವರು ಕನಸನ್ನು ತಮ್ಮ ಕಲೆಯಲ್ಲಿ ನನಸಾಗಿಸಿದ್ದಾರೆ. ಏಳನೇ ತರಗತಿವರೆಗೆ ಓದಿರುವ ಇವರು, ಹಲವು ಕ್ರಿಯಾಶೀಲ ಚಟುವಟಿಕೆಗಳಲ್ಲೂ ತೊಡಗಿಕೊಂಡಿದ್ದಾರೆ.

–ಮಹಾಂತೇಶ ಬಾಗೇವಾಡಿ, ಬಾಗಲಕೋಟೆ





## ಇದು 'ತೈಲ ಬಾವಿ'

ಚಿತ್ರದಲ್ಲಿ ಕಾಣುತ್ತಿರುವುದು ತೈಲ ಬಾವಿ. ತೈಲ ಬಾವಿ ಎಂದಾಕ್ಷಣ ಪೆಟ್ರೋಲ್, ಡೀಸೆಲ್ ಸಿಗುವ ಅರಬ್ ರಾಷ್ಟ್ರಗಳ ತೈಲ ಬಾವಿಯೆಂದು ಅರ್ಥೈಸಬೇಡಿ. ಇದು ಖಾದ್ಯಗಳಿಗೆ ಬಳಸುವ ತೈಲದ ಬಾವಿ. ಅಡುಗೆ ಎಣ್ಣೆ ಸಿಗುವ ಬಾವಿಯೇ ಎಂದು ಹುಬ್ಬೇರಿಸಬೇಡಿ. ಇಂಥದ್ದೊಂದು ತೈಲ ಬಾವಿ ನಮ್ಮ ಪಕ್ಕದ ರಾಜ್ಯದಲ್ಲೇ ಇದೆ. ಆದರೆ ಬಾವಿಯಲ್ಲಿ ಸಿಗುವ ತೈಲವನ್ನು ಅಡುಗೆಗೆ ಬಳಸುವುದರ ಬದಲಿಗೆ ಔಷಧಿಯಾಗಿ ಬಳಸಲಾಗುತ್ತದೆ. ತಮಿಳುನಾಡಿನ ನಂಜನಾರು ಪಟ್ಟಣದಲ್ಲಿ ತೋತಾದ್ರಿ ಎಂಬ ಒಂದು ವೆಂಕಟೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನವು ಭಾರತದಲ್ಲಿ ಇರುವ ಒಟ್ಟು ಎಂಟು ಸ್ವಯಂಭೂ ದೇವಸ್ಥಾನಗಳಲ್ಲಿ ಒಂದಾಗಿದೆಯಂತೆ. ಇಲ್ಲಿನ ವೆಂಕಟೇಶ್ವರನ ವಿಗ್ರಹಕ್ಕೆ ಪ್ರತಿನಿತ್ಯ ತೈಲಾಭಿಷೇಕ ನಡೆಯುವುದು ಇಲ್ಲಿನ ವಿಶೇಷ.

ಒಮ್ಮೆಯ ತೈಲಾಭಿಷೇಕಕ್ಕೆ ಕನಿಷ್ಠ ಮೂರು ಲೀಟರ್ ತೈಲ, ಎರಡು ಲೀಟರ್ ಹಾಲು ಹಾಗೂ ಎರಡು ಲೀಟರ್ ಮೊಸರು ಬೇಕಾಗುತ್ತದೆ. ಆದರೆ ವಿಶೇಷ ಉತ್ಸವಗಳಲ್ಲಿ ಇದರ ಪ್ರಮಾಣ ಗಣನೀಯವಾಗಿ ಏರಿಕೆಯಾಗುತ್ತದೆ. ಅಭಿಷೇಕಕ್ಕೆ ಬಳಸಿದ ಎಣ್ಣೆಯು ವ್ಯರ್ಥವಾಗಬಾರದೆಂದು ಹೊಂಡವೊಂದರಲ್ಲಿ ಸಂಗ್ರಹಿಸಿ, ಅದನ್ನು ಚಿತ್ರದಲ್ಲಿ ಕಾಣಿಸುತ್ತಿರುವ ಬಾವಿಗೆ ಪಂಪ್ ಮಾಡಲಾಗುತ್ತದೆ. ಬಾವಿಯಲ್ಲಿ ಸಂಗ್ರಹಗೊಂಡ ಹಾಲು, ಮೊಸರು, ನೀರು ಹಾಗೂ ಎಣ್ಣೆ ಈ ಬಾವಿಯಲ್ಲಿ ಚೆನ್ನಾಗಿ ಮಿಶ್ರಣಗೊಳ್ಳುತ್ತದೆ. ಅದನ್ನು ಕದಡದೆ ಹಾಗೆಯೇ ಬಿಟ್ಟರೆ ಹಾಲು ಹಾಗೂ ಮೊಸರು ಬಾವಿಯ ತಳ ಸೇರುತ್ತದೆ. ನಂತರ ಎಣ್ಣೆಯೊಂದಿಗೆ ನೀರು ಮೇಲೆ ಬರುತ್ತದೆ. ಸೂರ್ಯನ ಶಾಖಕ್ಕೆ ನೀರು ಆವಿಯಾಗಿ ಕೊನೆಗೆ ಎಣ್ಣೆ ಮಾತ್ರ ಉಳಿಯುತ್ತದೆ. ಹಾಲು, ಮೊಸರು ಹಾಗೂ ತೈಲ ಬೆರೆತದ್ದರಿಂದ ರಾಸಾಯನಿಕ ಕ್ರಿಯೆ ನಡೆದು ಅದು ಆಯುರ್ವೇದದ ಔಷಧಿಯಾಗಿ ಮಾರ್ಪಾಡಾಗುತ್ತದೆ ಎಂಬುದು ಇಲ್ಲಿನವರ ಮಾತು. ದೇವಸ್ಥಾನದ ಆಡಳಿತ ಮಂಡಳಿಯವರು ಐವತ್ತು ರೂಪಾಯಿಯಂತೆ ಪ್ರತಿ ನೂರು ಗ್ರಾಂ ಎಣ್ಣೆಯನ್ನು ಬಾಟಲಿಗಳಿಗೆ ತುಂಬಿಸಿಕೊಡುತ್ತಾರೆ.

–ಮುರಲೀಧರ ಕುಲಕರ್ಣಿ, ಬೀದರ್

## ಮಲ್ಲಿಗೆ ದರ್ಬಾರು

ಶಂಕರಪುರ ಮಲ್ಲಿಗೆ ಉಡುಪಿ ತಾಲ್ಲೂಕಿನ ವಾಣಿಜ್ಯ ಬೆಳೆ. ಜಾಗತಿಕ ಮನ್ನಣೆ ಪಡೆದ ಈ ಹೂವು ಸಾವಿರಾರು ಕುಟುಂಬಗಳ ಜೀವನಾಧಾರವೂ ಹೌದು. ಹೊತ್ತೇರುತ್ತಿದ್ದಂತೆ ಮಲ್ಲಿಗೆ ಮೊಗ್ಗು ಕೀಳಲು ತೊಡಗುವ ಮನೆಮಂದಿಗೆ 3–4 ಗಂಟೆಗಳ ಅವಿರತ ಕೆಲಸ. ಗಿಡಗಳಿಂದ ಬಿಡಿಸಿದ ಮೊಗ್ಗುಗಳನ್ನು ಬಾಳೆನಾರಿನಿಂದ ಒಪ್ಪವಾಗಿ ಲಗುಬಗೆಯಲ್ಲಿ ಕಟ್ಟುವ ಕೌಶಲ ಮೆಚ್ಚುವಂಥದ್ದು.

800 ಮೊಗ್ಗುಗಳನ್ನು ಕಟ್ಟಿ ಆಯತಾಕಾರದಲ್ಲಿ ಜೋಡಿಸುವುದಕ್ಕೆ ಚೆಂಡು ಅನ್ನುತ್ತಾರೆ. ಅಂತಹ ನಾಲ್ಕು ಚೆಂಡು ಒಂದು ಅಟ್ಟೆಯಾಗುತ್ತದೆ. ಕಟ್ಟಿದ ಹೂವನ್ನು ಸ್ಥಳೀಯ ಕಟ್ಟೆಯ ಏಜೆಂಟರು ಮನೆಗಳಿಗೇ ಬಂದು ಸಂಗ್ರಹಿಸುತ್ತಾರೆ. ಹೀಗೆ ಶೇಖರಿಸಿದ ಅಟ್ಟೆಗಳನ್ನು ಮುಂದಿನ ದೊಡ್ಡ ಕಟ್ಟೆಗೆ ಖಾಸಗಿ ಬಸ್ಸಿನ ಮೂಲಕ ರವಾನಿಸುತ್ತಾರೆ. ಶಂಕರಪುರದ ಕಟ್ಟೆಯಲ್ಲಿ ಪ್ರತಿದಿನ ಅಟ್ಟೆಯೊಂದರ ಬೆಲೆ ಬೇಡಿಕೆ ಮತ್ತು ಪೂರೈಕೆ ಆಧಾರದಲ್ಲಿ ನಿಗದಿಯಾಗುತ್ತದೆ.

ಮದುವೆ, ಜಾತ್ರೆ, ಕೋಲದ ಸಮಯದಲ್ಲಿ ಅಟ್ಟೆಯೊಂದರ ಬೆಲೆ 2100 ರೂಪಾಯಿ ಮುಟ್ಟುವುದೂ ಇದೆ. ಈ ಕೃಷಿಯ ಇನ್ನೊಂದು ವಿಶೇಷ ಅಂದರೆ 800 ಮೊಗ್ಗು ಕಿತ್ತು ಒಂದು ಚೆಂಡು ಕಟ್ಟಿದರೆ, 30 ರೂಪಾಯಿ ಸಿಗುತ್ತದೆ. ಉಪಕಸುಬಾಗಿ ಬೆಳೆದ ಈ ಹೂವಿಗೆ ದೇಶ ಮಾತ್ರವಲ್ಲ ವಿದೇಶದಲ್ಲಿಯೂ ಭಾರೀ ಬೇಡಿಕೆ. ಮೊನ್ನೆ ಊರಿಗೆ ಹೋದಾಗ ಮಲ್ಲಿಗೆ ಹೂವಿನ ಕೃಷಿಯ ಈ ಚಿತ್ರಗಳನ್ನು ಕ್ಲಿಕ್ಕಿಸಿಕೊಂಡೆ.

–ಧರ್ಮಾನಂದ ಶಿರ್ವ, ಬೆಂಗಳೂರು

